**ಚಾಸಾ-5 ಪ್ರಾಸಾ-1**

# 3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 7115/2020

| | |
|---|---|
| **ಸಾಕ್ಷಿದಾರರ ಹೆಸರು** | ಅನಿಲ್ ಕುಮಾರ್ ಕೆಡಿಯಾ.ಆರ್. |
| **ತಂದೆಯ ಹೆಸರು** | ಮೋಹನ್ ಲಾಲ್ ಕೆಡಿಯಾ. |
| **ವಯಸ್ಸು** | 54 ವರ್ಷ |
| **ಉದ್ಯೋಗ** | ವ್ಯವಹಾರ. |
| **ವಾಸ** | ಪೀಣ್ಯ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 06.03.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಚಾಸಾ-1 ರಿಂದ 4 ಮತ್ತು 6 ರವರು ಗೊತ್ತು. ಚಾಸಾ-1 ರವರು ನನ್ನ ಸ್ನೇಹಿತರಾಗಿದ್ದು , ಅವರು ನನಗೆ ಫೋನ್ ಮಾಡಿ ಆರೋಪಿಗೆ ಕಬ್ಬಿಣದ ಸೀಟ್ ಕೊಡಲು ಹೇಳಿದ್ದರು. ಅದರಂತೆ 2015 ರಲ್ಲಿ ರೂ.2ಲಕ್ಷದ ಮೌಲ್ಯದ ಕಬ್ಬಿಣದ ಸೀಟ್ ನ್ನು ಆರೋಪಿಗೆ ನನ್ನ ಅಂಗಡಿಯಿಂದ ನೀಡಿರುತ್ತೇನೆ. ನಾನು ಆರೋಪಿಗೆ ಸದರಿ ಮೆಟಲ್ಸ್‌ನ ಬಿಲ್ಲನ್ನು ಪಾವತಿಸುವಂತೆ ಅನೇಕ ಬಾರಿ ಫೋನ್ ಮಾಡಿರುತ್ತೇನೆ. ಆದರೆ ಆರೋಪಿ ಸದರಿ ಮೆಟಿರಿಯಲ್ಸ್‌ನ ಬಿಲ್ಲಿನ ಹಣ ಪಾವತಿ ಮಾಡಿದೆ ಫೋನ್ ಕರೆಗಳನ್ನು ಸಹ ಸ್ವೀಕರಿಸಿರುವುದಿಲ್ಲ. ನಂತರ ಚಾಸಾ-1 ಮತ್ತು ರವರ ಮಗ ಚಾಸಾ-4 ರವರು ಸಹ ಈ ಬಿಲ್ಲಿನ ಹಣ ಪಾವತಿ ಮಾಡುವಂತೆ ಆರೋಪಿಗೆ ಅನೇಕ ಬಾರಿ ಫೋನ್ ಮಾಡಿದರು ಸಹ ಅವರ ಫೋನ್ ಕರೆಗಳನ್ನು ಸಹ ಸ್ವೀಕರಿಸಿರುವುದಿಲ್ಲ. ಪೀಣ್ಯ ಇಂಡಸ್ಟ್ರಿಯಲ್ಸ್ ಅಸೋಸಿಯೇಶನ್ ನಲ್ಲಿ ಚಾಸಾ-1 ರವರು ಆರೋಪಿಯನ್ನು ಕರೆಯಿಸಿ ಒಂದು ಮೀಟಿಂಗ್ ಮಾಡಿರುತ್ತಾರೆ. ಆ ಮೀಟಿಂಗ್ ನಲ್ಲಿ ಆರೋಪಿಯು ಹಣವನ್ನು ಪಾವತಿಸುತ್ತೇನೆ ಎಂದು ಭರವಸೆ ನೀಡಿದ್ದನು. ಆದರೆ ಇಲ್ಲಿಯವರೆಗೆ ಯಾವುದೇ ಹಣವನ್ನು ಆರೋಪಿ ಪಾವತಿ ಮಾಡಿರುವುದಿಲ್ಲ. ಈ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು, ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಚಾಸಾ-5 ಪ್ರಾಸಾ-1**

**ಪಾಟೀ ಸವಾಲು : ಶ್ರೀ.ಪಿಎನ್ ಎಸ್ ಆರೋಪಿತರ ಪರ ವಕೀಲರಿಂದ**

ನಾನು ಸುಮಾರು 25 ವರ್ಷಗಳಿಂದ ವ್ಯವಹಾರವನ್ನು ಮಾಡುತ್ತಿದ್ದೇನೆ. ನಾನು ಸಂಬಂದಪಟ್ಟಂತಹ ಪ್ರಾಧಿಕಾರದಿಂದ ನೊಂದಾಯಿಸಿಕೊಂಡು ನನ್ನ ವ್ಯವಹಾರವನ್ನು ಮಾಡುತ್ತಿದ್ದೇನೆ. 2015 ರಲ್ಲಿ ನನ್ನ ವಾರ್ಷಿಕ ಟರ್ನ್ ಓವರ್ ರೂ.18 ರಿಂದ 20 ಕೋಟಿ ಇತ್ತು. ಅಲ್ಲದೇ ನಾನು ತೆರಿಗೆಯನ್ನು ಸಹ ಪಾವತಿ ಮಾಡುತ್ತಿದ್ದೇನೆ. ಚಾಸಾ-1 ರವರು ನನಗೆ ಆರೋಪಿಗೆ ಮೆಟಿರಿಯಲ್ಸ್ ಕೊಡುವಂತೆ 2015 ರಲ್ಲಿ ತಿಳಿಸಿರುತ್ತಾರೆ. ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. ಚಾಸಾ-1 ರವರು ನನಗೆ ಆರೋಪಿಗೆ ಮೆಟಿರಿಯಲ್ಸ್ ಸಪ್ಲೈ ಮಾಡುವಂತೆ ಹೇಳಿದಂತೆ ನಾನು ಅದರಂತೆ ಮಾಡಿರುತ್ತೇನೆ. ಆದರೆ ಅದಕ್ಕೂ ಮೊದಲು ನಾನು ಆರೋಪಿಗೆ ಯಾವುದೇ ಮೆಟಿರಿಯಲ್ಸ್ ಸಪ್ಲೈ ಮಾಡಿರುವುದಿಲ್ಲ. ನನ್ನ ಪ್ರಕಾರ ಆರೋಪಿಗೆ ಎರಡು ಬಾರಿ ರೂ.3ಲಕ್ಷ ಮೌಲ್ಯದ ಸಿ.ಆರ್. ಸೀಟ್ ಮೆಟಿರಿಯಲ್ಸ್ ಸಪ್ಲೈ ಮಾಡಿರುತ್ತೇನೆ. ಎರಡು ಬಾರಿಯೂ ಸಹ ಚಾಸಾ-1 ರವರು ಆರೋಪಿಗೆ ಮೆಟಿರಿಯಲ್ಸ್ ಸಪ್ಲೈ ಮಾಡುವಂತೆ ಹೇಳಿರುತ್ತಾರೆ. ಮೊದಲನೇ ಬಾರಿ ರೂ.2 ಲಕ್ಷಕ್ಕೂ ಹೆಚ್ಚು ಮೌಲ್ಯದ ಮೆಟಿರಿಯಲ್ಸ್ ಸಪ್ಲೈ ಮಾಡಿರುತ್ತೇನೆ. ಎರಡನೇ ಬಾರಿ ರೂ.1ಲಕ್ಷಕ್ಕೂ ಹೆಚ್ಚು ಮೌಲ್ಯದ ಮೆಟಿರಿಯಲ್ಸ್ ಸಪ್ಲೈ ಮಾಡಿರುತ್ತೇನೆ. ಆರೋಪಿಯು ನನಗ ರೂ.1ಲಕ್ಷದ ಬಿಲ್ಲಿನ ಹಣವನ್ನು ಪಾವತಿ ಮಾಡಿರುತ್ತೇನೆ. ಬಾಕಿ ಇರುವ ಬಿಲ್ಲಿನ ಹಣ ಪಾವತಿ ಮಾಡುವಂತೆ ನಾನು ಆರೋಪಿಗೆ ಯಾವುದೇ ಲೀಗಲ್ ನೋಟಿಸ್ ಕೊಟ್ಟಿರುವುದಿಲ್ಲ. ನನ್ನ ಅಕೌಂಟ್ ಪುಸ್ತಕದಲ್ಲಿ ಆರೋಪಿಯಿಂದ ರೂ.2ಲಕ್ಷ ಬರಬೇಕು ಎಂದು ತೋರಿಸಿರುತ್ತೇನೆ. ಸದರಿ ರೂ.2ಲಕ್ಷ ಹಣ ಬಾಕಿ ಇದೆ ಎಂದು ಕಳೆದ ವರ್ಷ ತೋರಿಸಿರುತ್ತೇನೆ. ಈ ವರ್ಷ ಬಾಕಿ ಇರುವ ಬಗ್ಗೆ ದಾಖಲೆ ಪರಿಶೀಲನೆ ಮಾಡಬೇಕು. ನಾನು ತೆರಿಗೆಯನ್ನು ಪಾವತಿ ಮಾಡುತ್ತಿದ್ದೇನೆ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**